**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,ಹುಣಸೂರು**

**ಸಿಸಿ ನಂ.773/2024**

**ಫಿರ್ಯಾದುದಾರರು:** ಸರ್ಕಾರ (ಹುಣಸೂರು ಪಟ್ಟಣ ಪೋಲೀಸರಿಂದ)

- ವಿರುದ್ಧ -

**ಆರೋಪಿತರು:**

1. ಸ್ವಾಮಿ.ಎಸ್., ಬಿನ್ ಲೇಟ್ ಶಿವರಾಮು,
   38 ವರ್ಷ, ಕೂಲಿ,
2. ಸಣ್ಣಮ್ಮ, ಕೋಂ ಲೇಟ್ ಶಿವರಾಮು,
   65 ವರ್ಷ, ಗೃಹಿಣಿ
3. ಅನಿತಾ, ಕೋಂ ಸ್ವಾಮಿ.ಎಸ್.,
   32 ವರ್ಷ, ಗೃಹಿಣಿ,

ಎಲ್ಲರೂ ರಂಗನಾಥ ಬಡಾವಣೆ,
ಕಲ್ಕುಣಿಕೆ, ಹುಣಸೂರು ತಾಲ್ಲೂಕು ವಾಸಿಗಳು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆ**

| | |
|---|---|
| ಪ್ರಶ್ನೆ 1: | ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷ್ಯಗಳನ್ನು ನೀವು ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿದಿದೆ |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 2: | ಪಿ.ಡಬ್ಲ್ಯೂ- 1 ಸಾಕಮ್ಮರವರು ತಮ್ಮ ಸಾಕ್ಷ್ಯದಲ್ಲಿ, ನಿಪಿ.1 ರ ದೂರನ್ನು ಅವರು ಅವರ ಮನೆಯ ಕಡೆಯವರಿಂದ ಬರೆದು ಕೊಟ್ಟಿದ್ದು, ಒಂದು ವರ್ಷದ ಹಿಂದೆ ಗಲಾಟೆಯಾದ ವಿಚಾರದ ಬಗ್ಗೆ ಸದರಿ ದಾಖಲೆಯ ಮೇಲೆ ಹೆಬ್ಬೆಟ್ಟು ಹಾಕಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ಅವರ ಮನೆಯ ಮುಂದೆ ಬಂದು ಗಲಾಟೆ ಮಾಡಿರುವ ಸಲುವಾಗಿ ಗ್ರಾಮದವರು ಯಾಕೆ ಗಲಾಟೆ ಮಾಡುತ್ತಿದ್ದೀರಿ ಎಂದು ಹೇಳಿದ್ದು, ನಂತರ ಅವರು ಯಾಕೆ ಗಲಾಟೆ ಮಾಡುತ್ತಿದ್ದೀರಾ ಯಜಮಾನರ ಹತ್ತಿರ ಸರಿ ಮಾಡಿಸಿಕೊಳ್ಳೋಣ ಎಂದು ತಿಳಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ 1ನೇ ಆರೋಪಿಯಾದ ನೀವು ಅವರ ಎದೆಗೆ, ತೊಡೆಗೆ ಹೊಡೆದಿದ್ದು, ಇದರ ಪರಿಣಾಮ ಅವರು ಜ್ಞಾನ ತಪ್ಪಿ ಬಿದಿದ್ದು, ಆಗ ಚಂದ್ರ ಅವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆಗೆ ದಾಖಲುಪಡಿಸಿದ್ದು, ನೀವು ಅವರ ಮನೆಯ ಹತ್ತಿರ ಹೋಗಿ ಚಾಸಾ.2ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |

| | |
|---|---|
| ಆರೋಪಿ ನಂ.2 | ಸಣ್ಣಮ್ಮ |
| ಪ್ರಶ್ನೆ 5: | ಪಿ.ಡಬ್ಲ್ಯು-2 ದಿನೇಶ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ಸಾಕಮ್ಮರವರ ಅವರ ತಾಯಿಯಾಗಿದ್ದು, ಚಾಸಾ.3 ಯೋಗೇಶ ಮತ್ತು ಚಾಸಾ.4 ಜಯರಾಮರವರು ಹಾಗೂ ಆರೋಪಿತರಾದ ನೀವು ಅವರಿಗೆ ಪರಿಚಯ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1ನೇ ಆರೋಪಿಯಾದ ನೀವು ಬಂದು ಅವರ ಎದೆಗೆ ಡಿಕ್ಕಿ ಹೊಡೆದಿದ್ದು, ನಂತರ ಅವರು ಏನು ಹೇಳದೇ ಮನೆಗೆ ಬಂದಿದ್ದು, ಅನಂತರ ನೀವೆಲ್ಲರೂ ಅವರ ಮನೆಯ ಮುಂದೆ ಬಂದು ಹೊಡೆದು ಸಾಯಿಸುತ್ತೇವೆ ಎಂದು ಹೇಳಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |

| | |
|---|---|
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಅವರ ತಾಯಿ ಅಡ್ಡ ಬಂದು ಊರಿನ ಯಜಮಾನರು ಇದ್ದಾರೆ ಅವರಿಂದ ನ್ಯಾಯ ಮಾಡಿಸೋಣ ಎಂದು ಹೇಳಿದಾಗ 1ನೇ ಆರೋಪಿಯಾದ ನೀವು ನಿನ್ನ ಮಗನಿಗೆ ಸರಿಯಾಗಿ ಬುದ್ದಿ ಹೇಳು ನಮಗೆ ಹೇಳಲು ಬರಬೇಡ ಎಂದು ಹೇಳಿ ಅವರ ತಾಯಿ ಚಾಸಾ.1ರವರನ್ನು ಹಿಡಿದುಕೊಂಡು ಹೊಡೆದಿದ್ದು, ಆಗ ಚಾಸಾ.3 ಮತ್ತು ಚಾಸಾ.4ರವರು ಬಂದು ಜಗಳ ಬಿಡಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ಚಾಸಾ.1ರವರ ಮುಂದಲೆಯನ್ನು ಹಿಡಿದು ತಲೆಯ ಭಾಗಕ್ಕೆ ಹೊಡೆದಿದ್ದು, ಆಗ ಅವರ ಅಣ್ಣ ಚಾಸಾ.1ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಈ ಸಂಬಂಧ ಅವರು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 9: | ಪಿ.ಡಬ್ಲ್ಯೂ – 6 ಗಿರೀಶ.ಪಿ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ |

| | |
|---|---|
| | 03.12.2023ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 11 ಗಂಟೆಗೆ ಚಾಸಾ.3ರವರು ಚಾಸಾ.1ರವರ ನಿಪಿ-1ರ ಲಿಖಿತ ದೂರನ್ನು ಅವರ ಮುಂದೆ ಹಾಜರುಪಡಿಸಿದ ಮೇರೆಗೆ ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಃ244/2023ರಲ್ಲಿ ಪ್ರಕರಣ ದಾಖಲಿಸಿ ನಿಪಿ-4 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 10: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಸ್ವೀಕರಿಸಿದ ದೂರನ್ನು ನಿಪಿ.1 ಮತ್ತು ನಿಪಿ-4ರಲ್ಲಿ ಅವರ ಸಹಿಗಳನ್ನು ನಿಪಿ.1(ಎ) ಹಾಗು ನಿಪಿ.4(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 11: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ |

| | |
|---|---|
| | 04.12.2023ರಂದು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟಾಗ ಪ್ರತ್ಯಕ್ಷ ಸಾಕ್ಷಿ ಮತ್ತು ಪಂಚರು ಹಾಜರಿರದೇ ಇದ್ದ ಕಾರಣ ಮಹಜರು ಕ್ರಮ ಜರುಗಿಸದೇ ಇದ್ದು, ನಂತರ ದಿನಾಂಕಃ 05.12.2023ರಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.8ರವರಿಗೆ ಹಸ್ತಾಂತರಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 12: | ಪಿ.ಡಬ್ಲ್ಯೂ – 7 ಜಮೀರ್ ಅಹಮದ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.12.2023ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.7ರವರಿಂದ ಸ್ವೀಕರಿಸಿ ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ ದಿನಾಂಕಃ 04.12.2023ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಕೃತ್ಯ ನಡೆದ ಸ್ಥಳವನ್ನು ತೋರಿಸಲು ಚಾಸಾ.1ರವರಾಗಲೀ ಪ್ರತ್ಯಕ್ಷ ಸಾಕ್ಷಿದಾರರಾಗಲೀ ಲಭ್ಯವಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |

| | |
|---|---|
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 13: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ,ದಿನಾಂಕಃ 05.12.2023ರಂದು ಚಾಸಾ.2 ಮತ್ತು ಚಾಸಾ.3ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು, ದಿನಾಂಕಃ 06.12.2023ರಂದು ಪುನಃ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಚಾಸಾ.1ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಚಾಸಾ.4 ಮತ್ತು ಚಾಸಾ.5ರವರಿಗೆ ಪಂಚರಾಗಿ ಸಹಕರಿಸಲು ಮೌಖಿಕವಾಗಿ ಕೋರಿಕೊಂಡ ಮೇರೆಗೆ ಅವರು ಒಪ್ಪಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 14: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1, ಚಾಸಾ-4 ಮತ್ತು ಚಾಸಾ.5ರವರ ಸಮಕ್ಷಮ ಬೆಳಿಗ್ಗೆ 10.00 ರಿಂದ 11.00 ಗಂಟೆಗೆ ಸ್ಥಳ ಮಹಜರು ಕ್ರಮ ಜರುಗಿಸಿದ್ದು, ಸದರಿ ಮಹಜರ್ ನಲ್ಲಿ ಅವರ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |

| | |
|---|---|
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 15: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿತರಾದ ನೀವು ಅವರ ಮುಂದೆ ಠಾಣೆಯಲ್ಲಿ ಹಾಜರಾದ ಮೇರೆಗೆ ನಿಮಗೆ ನೋಟೀಸ್ ನ್ನು ಜಾರಿಗೊಳಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ಹಾಗು ನಿಮ್ಮನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 16: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 07.03.2024ರಂದು ಚಾಸಾ.1ರವರ ಗಾಯದ ಪ್ರಮಾಣಪತ್ರವನ್ನು ನಿಪಿ-5ರಂತೆ ಸ್ವೀಕರಿಸಿದ್ದು, ಅದರಲ್ಲಿರುವ ಅವರ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಿದ್ದು ಹಾಗು ತನಿಖೆ ಪೂರ್ಣಗೊಂಡ ಕಾರಣ ಆರೋಪಿತರಾದ ನಿಮ್ಮ ವಿರುದ್ಧ ಸಾಕಷ್ಟು ಪುರಾವೆ ಕಂಡು ಬಂದ ಕಾರಣ ದೋಷಾರೋಣಾ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |

| | |
|---|---|
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 17: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |
| ಪ್ರಶ್ನೆ 18: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ ನಂ.1 | ಸ್ವಾಮಿ.ಎಸ್ |
| ಆರೋಪಿ ನಂ.2 | ಸಣ್ಣಮ್ಮ |
| ಆರೋಪಿ ನಂ.3 | ಅನಿತಾ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 10.03.2025.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**